ಅಭಿಮಾನ ಹೆಚ್ಚಾಗಿ ತಲಿಬಗಿಸಿಕೊಂಡು ಒಡಬಡ ಮನಿಗೆಬಂದು ನೋಡಿದೆ. ಆತ ಈ ಕಡೆನೆ ತಿನ್ನೋರಂಗ ನೋಡುತ್ತಿದ್ದ. ನಾಚಿ ದಬಕ್ಕನ ಕಿಟಕಿ ಮುಚ್ಚಿದೆ. ಗಂಡನಂಬೋದು ಆಗಲೇ ಮನಿಗೆ ಬಂದು ಬಡಬಡ ತಯಾರಾಗಂತ ಅಭಿನ ಎತಿಗಂದು ತಕ್ಕುಟಿ ಕುಣಿತಿತ್ತು. ಇನ್ನೇನು ರಡಿಯಾಗೋದಂತ ಜಾತ್ರಿಗೆ ಬಂದ್ವಿ.

ಉರುಕುಂದಿ ಈರಣ್ಣನ ಜಾತ್ರಿ ಸುತ್ತ ನಾಕಳ್ಳಿಗೆ ಹೆಸ್ರಾಗಿದ್ದರಿಂದ ತುಂಬಿ ತುಳುಕುತಿತ್ತು. ಅದ್ರಾಗ ಹರ್ಕಿಗೆ ಹೆಂಗ್ಸುಗಂಡ್ಸು ತಲೆ ಬೋಳಿಸಿಕೊಳ್ಳುವುದರಲ್ಲಿ ಬಿಸಿಯಾಗಿತ್ತು. ಎಲ್ಲಿ ನೋಡಿದ್ರು ಕರಿ, ಕೆಂಪನ ಬೋಳುತಲಿನೇ ಇದ್ವು. ಎಲ್ಲಿಬೇಕಲ್ಲಿ ಬಂಡಾರ, ಕುಂಕುಮ ಬಡಕಂದು ದೆವ್ವದಂಗ ಎದಿರಾಗುತಿದ್ವು. ಅದ್ರಾಗ ತಲಿ ಬೋಳಿಸಿಕೊಂಡ ಹೆಂಗಸರ ಮೆತ್ತನ ಬೋಳುತಲಿಗಳು ಮಿಣಿಮಿಣಿ ಮಿಂಚುತಿದ್ವು. ಕೆಲವೊಂದು ಜೋಡಿಗಳು ಬೋಳುಗುಂಡಿಯಾಗಿ ತೇರಿಗೆ ಬೆನ್ನುಮಾಡಿ ಸೆಲ್ಫಿ ತಗೊಳ್ಳುತಿದ್ರು. ಅಲ್ಲಿಲ್ಲಿ ತಲೆಬೋಳಿಸಿಕೊಂಡ ಗಂಡಸ್ರನ್ನ ನೋಡಿ, ನನ್ ಗಂಡ ಕೂಡ ಬೋಳುಗುಂಡ ಆಗ್ತಾನಂತ ಮುಸುಮುಸು ನಕ್ಕು ಅಭಿನ ಗಲ್ಲಹಿಂಡಿ 'ನಿಮ್ಮಪ್ಪ ಬೋಳುಗುಂಡ... ಬೋಳುಗುಂಡ...' ಅಂತ ಛೇಡಿಸಿ ಮುದ್ದುಕೊಟ್ಟೆ. ಹಾಲುಗಲ್ಲದ ಅಭಿ ಅದೇನು ಕಂಡಿತೋ... ದವಡಿ ಉಬ್ಬಿಸಿ ಕುಚುಕುಚು ನಕ್ಕಿತು. ಇದೆ ಖುಷಿಲೆ ಬಂಗಾರದ ಗುಂಡು ಗುಂಡಂತ ಇನ್ನೊಂದು ಮುದ್ದು ಲಚಕ್ಕನ ಕೊಟ್ಟು ಗಿಲಿಗಿಂಚಿ ಕೊಡಿಸಿದೆ. ಆಗ ಸುಮ್ಮನಾತು. ಗುಡಿಗೆ ಕರಕೊಂಡೋಗಿ ಕಾಯಿ, ಕರ್ಪೂರ ಹೆಡಿ ಅರ್ಪಿಸಿ ಡೋಲು, ಡಮಾರಿನಿಂದ ತೇರು ಎಳೆಟ್ವೆಮಿನ್ನ್ಯಾಗ ಹೊಳೆಗೆ ಕರಕೊಂಡು ಬಂದ. ತೇರು ನೋಡಬೇಕನಿಸಿ ಗುಡಿಕಡೆ ಮುಖಮಾಡಿದೆ. ತೇರಿನಮುಂದ ಎಷ್ಟುಮಂದಿ ಇದ್ರೋ... ಅಷ್ಟೇಮಂದಿ ಹೊಳೆದಂಡಿಗೆ ತಲೆಬೋಳಿಸಿಕೊಂಡು ತಣ್ಣೇರಿನ್ಯಾಗ 'ಈರಣ್ಣ... ಈರಣ್ಣಾ...!' ಅಂತ ಮುಳುಗುತಿದ್ರು. ಹೊಳೆದಂಡಿ ಸಮತಟ್ಟಾಗಿ ಹರಿತಿತ್ತು. ದಂಡಿತುಂಬ ಕೂದಲು ಗುಡ್ಡೆನೇ ಬಿದ್ದಿತ್ತು. 'ಬೋಳುಗುಂಡ ಈಗ ಆಗ್ತಾನ... ಆಗ ಆಗ್ತಾನ...' ಅಂತ ಗಂಡನ ದಿಟ್ಟಿಸಿ ನೋಡುತ್ತ ಅಭಿನ ಎತ್ತಿಕೊಂಡು ಹೊಳೆದಂಡಿಮ್ಯಾಲೆ ತೇರಿನ ಕಡೆನೆ ಮುಖಮಾಡಿ ನಿಂತಿದ್ದೆ. ಯಾರೋ ಸಣ್ಣಪೆಟಾರಿ ಹಿಡಿದು ಗಂಡನ ಬದಿಗೆಬಂದು ಏನೇನೋ ಮಾತಾಡುತ್ತ ನಿಂತ. ಗಂಡ ಒಮ್ಮೆಲೆ 'ಏ... ಅಭಿನ ತಾ...' ಎಂದ. ಯಾಕಂದೆ. 'ಉರುಕುಂದಿ ಈರಣ್ಣಗ ತಲೆಮುಂಡೆ ಚೊಚ್ಚಲ ಹಡ್ದ ಹೆಣ್ತನೇ ಕೊಡಬೇಕಂಥ. ನನಗ ಕೊಡಾಕ ಬರಲ್ಲ...' ಅಂತ ಅಭಿನ ಕಸಕೊಂಡ.

ಒಮ್ಮಿಗೆ ಜೀವ ಝಲ್ಲೆಂತು. 'ತಲಿಮುಂಡೆ ಕೊಡಲ್ಲ. ಬೇಕಾದ್ರ ನೀನೇ ಕೊಡು. ನೀನೆ ಮೊದ್ಲು ಬೇಡಿಕೊಂಡಿದ್ದೆಲ್ಲಾ.' ಒಲ್ಲೆ ಒಲ್ಲೆಂತ ಎದಿಮ್ಯಾಗಿದ್ದ ಅಭಿನ ಕಿತ್ತಿಕೊಳ್ಳಾಕ ಕೊಸರಾಡಿದೆ. ಅಭಿನ ಬಿಡಲಿಲ್ಲ. ಗಟ್ಟಿಗೆ ಎತ್ತಿಕೊಂಡಿದ್ದ. ಇಬ್ಬರ ಗಲಾಟೆಗೆ ಅಭಿ ಬೋರಾಡಿ ಅತ್ತ. ಅಲ್ಲಿದ್ದ ಹೆಂಗ್ಸರೆಲ್ಲರೂ ನಮ್ ಗಲಾಟೆಗೆ 'ಚೊಚ್ಚಲ ಗಂಡುಮಗಾದ್ರ ಹೆಣ್ತನೆ ತಲೆಮುಂಡೆ ಕೊಡಬೇಕನ್ನೋದು ಈರಣ್ಣನ ಪದ್ಧತಿ ಐತೆವ್ವಾ, ಕೊಟ್ರ ಒಳ್ಳೆದಾಗುತ್ತ' ಅಂತ ಏನೇನೋ ತತ್ವಹೇಳಿ ರಮಿಸಿ ಸಣ್ಣ ಪೆಟಾರಿಯವನ ಮುಂದ ಕೂರಿಸಿದ್ರು. ಸಣ್ಣಪೆಟಾರಿ ಹಿಡಿದವ ತಲೆಬಗ್ಗಿಸಿ ಕರಕರಂತ ತಲಿ ಬೋಳಿಸಾಕ ಮುಂದಾದ. ತಲೆ ಕರಕರ ಅಂದಷ್ಟು ಹಲ್ಲುಕಡಿದು ಎದಿರಿಗೆ ನಿಲುಗಂಬಾಗಿ ನಿಂತಿದ್ದ ಗಂಡನ ಎಗಿರಿ ಒದಿಬೇಕನಿಸ್ತು. ಆದ್ರ ತಲೆ ಬೋಳಿಸುವಾತ ಕತ್ರಿಗಾಲಲಿ ಕುರಿಯಂಗ ತಲೆ ಸಿಕ್ಕಿಸಿಕೊಂಡಿದ್ದ. ತಲೆ ಎತ್ತಲೂ ಆಗಲಿಲ್ಲ. ಕಣ್ಣೀರೊಂದೆ ದಳದಳ ಇಳಿತಿದ್ವು. ಏಟು ಕೊಸರಾಡಿದ್ರೂ ಕೊನಿಗೆ ಬೋಳ್ಯಾದೆ. ನಡ ಹೊಳ್ಯಾಗ ನಿಲ್ಲಿಸಿ ತಣ್ಣೇರಿನ್ಯಾಗ ಐದುಬ್ಯಾರೆ ಮುಳುಗಿಸಿದಾಗ ಚಿಟ್ಟಿಮೀನು, ಏಡಿ ಒಂದಕ್ಕೊಂದು ಕಲ್ಲುಪಡಿಕಿನ್ಯಾಗ ಬಿದ್ದಿದ್ದ ಅನ್ನ, ಹೋಳಿಗಿ, ಉಂಡಿ, ಪ್ರಸಾದ ಕುಕ್ಕುಕ್ಕಿ ತಿಂದಾಡುತಿದ್ವು. 'ಇವ್ನ ಹೆಣ್ಣಾಗಿ ಹುಟ್ಟುವುದಕ್ಕಿಂತ ಈ ಮೀನ, ಏಡಿ, ಕಸ ಕಡ್ಡ್ಯಾಗಿ ಹುಟ್ಟಿದ್ರ ಎಷ್ಟೋ ಬೇಸಿತ್ತು..' ಅಂತ ಮುಳುಗಿದಾಗೊಮ್ಮೆ ಅತ್ತೆ. ಹೊಳೆಮಾತ್ರ ತನ್ನ ಪಾಡಿಗೆ ತಾನು ಸೆವ್ವಂತ ಕುದ್ರಿ ಓಡಿದಂಗ ಓಡುತಿತ್ತು. ನಡ ಹೊಳ್ಯಾಗ, ಗುಂಡಿನ ಮ್ಯಾಲ ಕಲ್ಲಾಗಿ ನಿಂತವಳು ತೇರು ನೋಡಾಕ ಮನಸ್ಸು ಆಗಲಿಲ್ಲ. ಗಂಡನಂಬೋದು ತೇರು ನೋಡಿ ಪಳಾರ, ಈಭೂತಿ, ಬಂಡಾರ, ಕುಂಕುಮ, ಬಳೆ ಮತ್ತು ಹುಲಿಮ್ಯಾಲೆ ಕೂತ ಈರಣ್ಣನ ಫೋಟನೂ ತಗಂದು ಬಂದ.

ಮನಿಗೆ ಬಂದು ಒಂದೆರಡು ದಿನಗಳವರೆಗೆ ಬೋಳ್ಯಾಗಿದ್ದು ಅಭಿಗೆ ಗುರುತು ಸಿಗದೆ ಬೋರಾಡಿ